ಪೊಲೀಸ್ ಮಹಾ ನಿರ್ದೇಶಕರ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು
ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ
ಪಡೆಯ ನಿರ್ದೇಶನಾಲಯ
ನಂ.1 ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 080 25570733
22971501
22971507

ಸಂಖ್ಯೆ: ಜಿಬಿಸಿ(1)468/2022 ದಿನಾಂಕ:03-10-2025

E-Office Com No.62252

ಗೆ,

ಕಾರ್ಯದರ್ಶಿಗಳು,

ಮಹಾತ್ಮ ಗಾಂಧಿ ವಿದ್ಯಾ ಪೀಠ ಟ್ರಸ್ಟ್,

ಶಾವಿಗೆ ಮಲ್ಲೇಶ್ವರಂ ಬೆಟ್ಟ,

ಕುಮಾರಸ್ವಾಮಿ ಬಡಾವಣೆ,

ಬೆಂಗಳೂರು-560 078.

ಮಾನ್ಯರೆ,

ವಿಷಯ: ಸರ್ವೆ ನಂ. 53, ಜರಗನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ಇಲ್ಲಿ ನಿರ್ಮಿಸಲಾಗಿರುವ 07 ಶೈಕ್ಷಣಿಕ ಕಟ್ಟಡಗಳಿಗೆ (i.e. Department of C.D. Sagar Biological Block, Business Block MCA Block, New Engineering Block, PU & Nursing College, Sharada School and Old Dental College) ಸಮಾಪನ ಪತ್ರ ನೀಡುವ ಬಗ್ಗೆ.

ಉಲ್ಲೇಖ:1) ಈ ಕಚೇರಿಯಿಂದ ನೀಡಲಾದ ಸಲಹಾ ಪತ್ರ ಸಂ. ಜಿಬಿಸಿ(1)468/2022 (KSFES/223/2022) ದಿನಾಂಕ:18-08-2023
2) ನಿಮ್ಮ ಪತ್ರ ದಿನಾಂಕ:08-05-2025.

* * * *

ಬೆಂಗಳೂರಿನ ಉತ್ತರಹಳ್ಳಿ ಹೋಬಳಿಯ ಜರಗನಹಳ್ಳಿ ಗ್ರಾಮದ ಸರ್ವೆ ನಂ. 53 ಇಲ್ಲಿ ನಿರ್ಮಿಸಲಾಗಿರುವ 7 High Rise & 13 Low Rise ಕಟ್ಟಡಗಳಿಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಉಲ್ಲೇಖ(1)ರಂತೆ ಸಲಹಾ ಪತ್ರ ನೀಡಲಾಗಿರುತ್ತದೆ. ಸದರಿ ಶೈಕ್ಷಣಿಕ ಕಟ್ಟಡಗಳ ಪಯಕಿ 07 ಶೈಕ್ಷಣಿಕ ಕಟ್ಟಡಗಳಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಸಮಾಪನಾ ಪತ್ರ ನೀಡುವಂತೆ ಉಲ್ಲೇಖ(2)ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ದಕ್ಷಿಣ ವಲಯ ರವರು ದಿನಾಂಕ:27-05-2025 ಮತ್ತು 20-09-2025 ರಂದು ಬೆಂಗಳೂರಿನ ಉತ್ತರಹಳ್ಳಿ ಹೋಬಳಿಯ ಜರಗನಹಳ್ಳಿ ಗ್ರಾಮದ ಸರ್ವೆ ನಂ. 53 ಇಲ್ಲಿ ನಿರ್ಮಿಸಲಾಗಿರುವ 7 ಶೈಕ್ಷಣಿಕ ಕಟ್ಟಡಗಳನ್ನು ಪರಿವೀಕ್ಷಣೆ ಮಾಡಲಾಗಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಲ್ಲಿ ತಿಳಿಸಲಾದಂತೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು 07 ಶೈಕ್ಷಣಿಕ ಕಟ್ಟಡಗಳಲ್ಲಿ (i.e. Department of

C.D. Sagar Biological Block, Business Block MCA Block, New Engineering Block, PU & Nursing College, Sharada School and Old Dental College)ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ಹಾಗೂ ಸದರಿ ಕಟ್ಟಡದಲ್ಲಿನ ನೌಕರರು/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿ ಇರುವುದಾಗಿ ತಿಳಿಸಿ, ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ, ಬೆಂಗಳೂರಿನ ಉತ್ತರಹಳ್ಳಿ ಹೋಬಳಿಯ ಜರಗನಹಳ್ಳಿ ಗ್ರಾಮದ ಸರ್ವೆ ನಂ. 53 ಇಲ್ಲಿ ನಿರ್ಮಿಸಲಾಗಿರುವ 07 ಶೈಕ್ಷಣಿಕ ಕಟ್ಟಡಗಳಲ್ಲಿ (i.e. Department of C.D. Sagar Biological Block G+5upper floors Height of 18.00 mtrs. Business Block G+6 upper floors Height of 18.00 mtrs MCA Block G+5upper floors Height of 18.00 mtrs., New Engineering Block G+7upper floors Height of 21.00 mtrs , PU & Nursing College G+4upper floors Height of 15.00 mtrs, Sharada School G+4 upper floors Height of 15.10 mtrs and Old Dental College G+4 upper floors Height of 15.00 mtrs) ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಲಹಾ ಪತ್ರ ದಿನಾಂಕ:18-08-2023 ರಲ್ಲಿ ತಿಳಿಸಿರುವಂತೆ ಅಗ್ನಿರಕ್ಷಣೆ, ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಹಾಗೂ ನಿಮ್ಮ ದಿನಾಂಕ:03-10-2025 ರ ಮುಚ್ಚಳಿಕೆ ಪತ್ರದಲ್ಲಿ ಒಪ್ಪಿರುವಂತೆ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಮತ್ತು ಕಟ್ಟಡದಲ್ಲಿನ 40% ರಷ್ಟು ಸಿಬ್ಬಂದಿ / ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ಬೆಂಗಳೂರಿನ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ 03 ತಿಂಗಳೊಳಗೆ ಸೂಕ್ತ ತರಬೇತಿಯನ್ನು ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿನ ಮೇಲೆ ಸಮಾಪನ ಪತ್ರವನ್ನು ನೀಡಲಾಗಿದೆ.

ಈ ಸಮಾಪನಾ ಪತ್ರವು ಜಾರಿಯಾದ ದಿನಾಂಕದಿಂದ ಮುಂದಿನ ಎರಡು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಸಮಾಪನ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿತಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನ್ವಯ ಸದರಿ ಕಟ್ಟಡದ ಸುತ್ತ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಯಾವುದೇ ಹೆಚ್ಚುವರಿ ರಚನೆಗಳನ್ನು ನಿರ್ಮಾಣ ಮಾಡಿದರೆ ಅಥವಾ ಯಾವುದೇ ರೀತಿಯ ಖಾಯಂ / ತಾತ್ಕಾಲಿಕ ಅಡಚಣೆಗಳನ್ನು ಉಂಟು ಮಾಡಿದರೆ, ಈ 'ಸಮಾಪನಾ ಪತ್ರ'ವು ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

**ತಮ್ಮ ವಿಶ್ವಾಸಿ,**

**ಡಿಜಿಪಿ & ಡಿಜಿ ರವರಿಂದ**
**ಕರಡು ಅನುಮೋದಿಸಲ್ಪಟ್ಟಿದೆ**

Digitally signed by
T N SHIVASHANKARA
Date: 03-10-2025
17:44:11

**(ಟಿ.ಎನ್.ಶಿವಶಂಕರ)**
**ನಿರ್ದೇಶಕರು**
**ಪೊಲೀಸ್ ಮಹಾ ನಿರ್ದೇಶಕರು**
**ಹಾಗೂ ಮಹಾ ನಿರ್ದೇಶಕರು**
**ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು**
**ರವರ ಪರವಾಗಿ**

ಪ್ರತಿ: ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ದಕ್ಷಿಣ ವಲಯ, ಬೆಂಗಳೂರು

GALIS
WAMY

Digitally signed by
GALISWAMY
DN: cn=GALISWAMY c=IN
o=MAHATMA GANDHI VIDYA
PEETHA TRUST
ou=MANAGEMENT
Reason: I am the author of this
document
Location:
Date: 2026-01-22 15:32+05:30